2001–2002	3 ರಾಜಸ್ವ ಮತ್ತು 12 ಸಿವಿಲ್ ತಪಾಸಣಾ ವರದಿಗಳು	ಉತ್ತರ ಸಲ್ಲಿಸುವುದು ಪ್ರಗತಿಯಲ್ಲಿದೆ

ಆ) ಈಗಾಗಲೇ ಉತ್ತರಗಳನ್ನು ಸಲ್ಲಿಸಲಾಗಿರುವುದರಿಂದ ಮತ್ತು ಬಾಕಿ ಇರುವ ಕಂಡಿಕೆಗಳಿಗೆ ಉತ್ತರಗಳನ್ನು ವಿವಿಧ ಘಟಕಗಳಿಂದ ಪಡೆದು ಸಂಚಿತಗೊಳಿಸುವ ಕ್ರಮ ಪ್ರಗತಿಯಲ್ಲಿರುವುದರಿಂದ ಆರ್ಥಿಕ ಅಕ್ರಮ ಇತ್ಯಾದಿಗಳನ್ನು ಉತ್ತೇಜಿಸುವ ಸಂದರ್ಭ ಇರುವುದಿಲ್ಲ.

ಇ) ಅಧಿಕಾರಿಗಳು ಉತ್ತರಗಳನ್ನು ಮಂಡಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮುದ್ರಾಂಕ ಶುಲ್ಕ ವಿನಾಯಿತಿಯನ್ನು ರದ್ದುಪಡಿಸುವುದು

3265 (4034) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರು ಬ್ಯಾಂಕು ಮತ್ತು ಸಹಕಾರ ಸಂಸ್ಥೆಗಳಿಂದ ಪಡೆಯುತ್ತಿರುವ ಬೆಳೆ ಸಾಲಕ್ಕೆ ನೀಡಿದ್ದ ಮುದ್ರಾಂಕ ಶುಲ್ಕ ವಿನಾಯಿತಿಯನ್ನು ಹಿಂತೆಗೆಯಲಾಗಿದೆಯೇ;

ಆ) ಈಗ ಯಾವ ದರದಲ್ಲಿ ಶುಲ್ಕ ವಿಧಿಸಲಾಗಿದೆ.

ಇ) ಬೆಲೆ ಕುಸಿತ, ಬರಗಾಲದ ಸಂಕಷ್ಟಕ್ಕೆ ಸಿಕ್ಕಿರುವ ರೈತರಿಗೆ ಈ ಹಂತದಲ್ಲಿ ಮುದ್ರಾಂಕ ಶುಲ್ಕ ವಿನಾಯಿತಿ ರದ್ದು ಮಾಡಿರುವುದರಿಂದ ರೈತ ವರ್ಗ ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರ ಶುಲ್ಕ ವಿನಾಯಿತಿ ಮುಂದುವರೆಸುವುದೇ; ಈ ಬಗ್ಗೆ ತಕ್ಷಣ ಆದೇಶ ನೀಡಲಾಗುವುದೇ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಹೌದು

ಆ) ದಿನಾಂಕ: 1.4.2003 ರಿಂದ ಮುದ್ರಾಂಕ ಶುಲ್ಕವನ್ನು ಪ್ರತಿ ಸಾವಿರಕ್ಕೆ ರೂ 5.00 ರಂತೆ ವಿಧಿಸಲಾಗುತ್ತಿದೆ.

ಇ) ಹೌದು.

ಈ) ನಿಗದಿಪಡಿಸಿದ ಮುದ್ರಾಂಕ ಶುಲ್ಕದ ದರವು ಅತಿ ಕಡಿಮೆಯಾಗಿರುವುದರಿಂದ ರೈತರಿಗೆ ಅಂತಹ ಹೊರೆ ಆಗುವುದಿಲ್ಲ.

ಮಂಡ್ಯ ನಗರದಲ್ಲಿನ ಕ್ರೀಡಾ ಶಾಲೆಯನ್ನು ಪುನರಾರಂಭಿಸುವುದು

3266 (4118) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿನ ಕ್ರೀಡಾ ವಸತಿ ಶಾಲೆಗೆ, ಎಲ್ಲಾ ಮೂಲಭೂತ ಸೌಕರ್ಯಗಳು ಇರುವುದನ್ನು ಸರಕಾರವು ಗಮನಿಸದೆಯೇ?

ಆ) ಹಾಗಿದ್ದಲ್ಲಿ ಮುಚ್ಚಿರುವ ಈ ಕ್ರೀಡಾಶಾಲೆಯನ್ನು ಪುನರಾರಂಭಿಸಲು ಇರುವ ತೊಡಕುಗಳೇನು?